## ವೆರೊನಿಕ ನಿಯಾರೀಬೊ ಸಂದರ್ಶನ

◆ **ನಿಮ್ಮ ಬಾಲ್ಯದ ಪರಿಸರ ಮತ್ತು ಶಾಲಾದಿನಗಳ ಬಗ್ಗೆ ತಿಳಿಸಿ..**

ನಾನು ಹುಟ್ಟಿ ಬೆಳೆದದ್ದು ಕೀನ್ಯಾದಲ್ಲಿ. ನನ್ನ ಕುಟುಂಬದಲ್ಲಿ ನಾನೇ ಕೊನೆಯವಳು. ಹಾಗಾಗಿ ನನ್ನ ಪಾಲಿಗೆ ಎಲ್ಲವೂ ಆರಾಮವಾಗಿ ಇರತ್ತೆ ಅಂತ ನಾನಂದುಕೊಂಡಿದ್ದೆ. ಆದ್ರೆ ಹಾಗಾಗಲಿಲ್ಲ. ನನ್ನ ತಾಯಿ ಕಟ್ಟುನಿಟ್ಟಿನ ಕ್ರಿಶ್ಚಿಯನ್ ಮಹಿಳೆ. ಕಠಿಣವಾದ ನಿಯಮಗಳು, ಬಲವಾದ ನಂಬಿಕೆಗಳು ಮತ್ತು ಆಕೆಯ ಶಿಸ್ತಿನ ಕ್ರಮಗಳನ್ನು ನಾನು ಪಾಲಿಸಲೇಬೇಕಿತ್ತು. ಅವುಗಳ ಬಗ್ಗೆ ಊಹೆ ಮಾಡಿಕೊಳ್ಳೋದಕ್ಕೂ ನಿಮಗೆ ಕಷ್ಟ ಆಗತ್ತೆ. ಆ ದಿನಗಳಲ್ಲಿ ಅವೆಲ್ಲಾ ಕಷ್ಟ ಅನಿಸಿತ್ತು. ಚಿಕ್ಕವಳಿದ್ದಾಗ, ನಮ್ಮಪ್ಪ, ಅಮ್ಮ ಯಾಕೆ ಹಾಗೆ ಆಡ್ತಾರೆ ಅಂತ ನನಗೆ ಅರ್ಥ ಆಗ್ತಿರಲಿಲ್ಲ. ಈಗ ವಯಸ್ಸಿಗೆ ಬಂದ ಮೇಲೆ, ಎಲ್ಲಾ ಚೆನ್ನಾಗಿ ಅರ್ಥ ಆಗ್ತಿದೆ. ಅಮ್ಮ ಆಗೋದು ಅಷ್ಟು ಸುಲಭವಲ್ಲ. ಆಗೊಮ್ಮೆ ಹೇಳ್ತಿದ್ದಿದ್ದು ನಿಜ. 'ಕಬ್ಬಿಣ ಬಿಸಿ ಇರುವಾಗಲೇ ಬಡಿಬೇಕು' ಅನ್ನೋ ಮಾತನ್ನ ನಾನು ಒಪ್ಪುತ್ತೇನೆ. ಆಕೆ ನನ್ನೊಳಗೆ ತುಂಬಿದ ಮೂಲ ಮೌಲ್ಯಗಳನ್ನು ನಾನು ಜೀವನ ಪೂರ್ತಿ ಜೊತೆಯಲ್ಲಿ ಇಟ್ಟುಕೊಳ್ಳುತ್ತೇನೆ. ಆ ದಿನಗಳಲ್ಲಿ ಅವಳು ಏಕೆ ಅಷ್ಟು ನೇರ ಮತ್ತು ಕಟುವಾಗಿದ್ದಳು ಅಂತ ನನಗೆ ಅರ್ಥವಾಗುತ್ತಿರಲಿಲ್ಲ. ಆದರೆ ಈಗ ನಾನು ಅವಳನ್ನು ಆದರ್ಶವಾಗಿ ನೋಡುತ್ತೇನೆ. ನನ್ನ ಅಮ್ಮ ನನ್ನ hero. ಸಾರಿ 'shero'. ನಿಜ. ನನ್ನಿಡೀ ಬದುಕಿನ ಮೇಲೆ ಅವಳಷ್ಟು ಬೇರೆ ಯಾರೂ ಪ್ರಭಾವ ಬೀರಿಲ್ಲ.

ಶಾಲಾ ದಿನಗಳನ್ನು ಬಿಂದಾಸ್ ಆಗಿ ಕಳೆದಿದ್ದೇನೆ. ಪ್ರಾಥಮಿಕ ಶಾಲಾ ದಿನಗಳು ತುಂಬಾ ಮಜವಾಗಿದ್ದವು. ಮಿಸ್ ಯುನಿಸ್ ಹೆಸರಿನ ಅದ್ಭುತವಾದ ಶಿಕ್ಷಕಿಯನ್ನು ನಾನ್ಯಾವತ್ತಿಗೂ ಮರೆಯೋದಿಲ್ಲ. ಆಕೆ ನಿಜಕ್ಕೂ ಆಕಾಶದಿಂದ ಧರೆಗಿಳಿದು ಬಂದವಳು ಅಂತ ನಮಗೆಲ್ಲರಿಗೂ ಅನಿಸುತ್ತಿತ್ತು.

◆ **ಬಾಲ್ಯದ ತುಂಟಾಟದ ಘಟನೆ ಯಾವುದಾದರೂ ನೆನಪಿದೆಯಾ?**

ಸರಿಯಾಗಿ ನೆನಪಾಗುತ್ತಿಲ್ಲ. ಆದರೆ ಓಣಿಯ ಮಕ್ಕಳೆಲ್ಲಾ ಒಂದು ಕಡೆ ಸೇರಿದಾಗ ಮದುವೆ ಆಟ ಆಡ್ತಾ ಇದ್ದದ್ದು ಮಾತ್ರ ನೆನಪಿದೆ. ಹೊಸ ಬಟ್ಟೆ, ಥರಾವಾರಿ ಅಡುಗೆ, ವಧು-ವರೋಪಚಾರ ಎಲ್ಲಾ ಅಭಿನಯ ಮಾಡಿ ತೋರಿಸುತ್ತಿದ್ದೆವು. ಗಂಡ–ಹೆಂಡತಿ ಆಟ ಆಡುವಾಗ ಕದ್ದು ಮುಚ್ಚಿ ಮುತ್ತು ಕೊಡುತ್ತಿದ್ದ ಆ ನೆರೆಮನೆಯ ತುಂಟ ಹುಡುಗ ಈಗಲೂ ನೆನಪಾಗುತ್ತಾನೆ. ಹಾಗೆ ನೋಡಿದರೆ ಅವನೊಬ್ಬ ಬಲಿಪಶು ಅಂತಲೇ ಹೇಳಬೇಕು! ಈಗ ಬೆಳೆದು ದೊಡ್ಡವಳಾದ ಮೇಲೆ ನನಗೆ ಅನ್ನೋದು: ಹೆಣ್ಣು ಮಕ್ಕಳ ಪಾಲಿಗೆ ಮದುವೆಯೂ ಒಂದು ಆಟ ಅಲ್ಲವೆ? ಆದರೆ ಅತ್ಯಂತ ಅಪಾಯಕಾರಿ ಆಟ!

◆ **ನಿಮ್ಮ ಸಾಂಸ್ಕೃತಿಕ ಹಿನ್ನಲೆಯ ಕುರಿತು ಸ್ವಲ್ಪ ಹಂಚಿಕೊಳ್ಳಬಹುದಾ?**

ಕೀನ್ಯಾದ ಬಂಟು ಪಂಗಡದ ಅಬಗುಸಿ ಭಾಷಾ ಸಮುದಾಯಕ್ಕೆ ಸೇರಿದವಳು ನಾನು. ಅಬಗುಸಿ ತಾಯ್ನುಡಿಯೂ ಹೌದು ನನ್ನ ಉಪ ಪಂಗಡವೂ ಹೌದು. ನಾವು ಹಲವು ಹಬ್ಬ ಮತ್ತು ಆಚರಣೆಗಳನ್ನ ಆಚರಿಸುತ್ತೇವೆ. ಎಲ್ಲಾ ಜನ ಸಮುದಾಯಗಳಲ್ಲಿ ಸಾಮಾನ್ಯವಾಗಿ ನಡೆಯುವ ಆಚರಣೆಗಳೆಂದರೆ ಮದುವೆ, ವಧುದಕ್ಷಿಣಾ ಕಾರ್ಯ, ಹಿರಿಯರಿಗೆ ಎಡೆ ಹಾಕುವುದು ಹೀಗೆ ಹಲವು. ಪೀಳಿಗೆಯಿಂದ ಪೀಳಿಗೆಗೆ ಹರಿದು ಬಂದ ಕಥೆ, ಹಾಡು, ಒಗಟು ಹಾಗೂ ಗಾದೆಗಳು ನನ್ನ ತಾಯ್ನುಡಿಯಾದ ಅಬಗುಸಿಯನ್ನು ಶ್ರೀಮಂತಗೊಳಿಸಿವೆ. ಹುಟ್ಟಿನಿಂದ ಸಾವಿನ ತನಕ ಹಲವು ಬಗೆಯ ಸಾಂಸ್ಕೃತಿಕ ನಡಾವಳಿಗಳ ಮೂಲಕ ನಾವು ಬದುಕನ್ನೇ ಒಂದು ಆಚರಣೆಯಂತೆ ಸಂಭ್ರಮಿಸುತ್ತೇವೆ. ಹಬ್ಬಗಳು ವರ್ಣರಂಜಿತವಾಗಿದ್ದು, ನಗು, ಹಾಡು, ಕುಣಿತ, ಕೇಕೆ ಮತ್ತು ಸಮುದಾಯದ ಬೆಚ್ಚಗಿನ ಆಲಿಂಗನದಿಂದ ತುಂಬಿವೆ. ಹಬ್ಬದ ದಿನಗಳಲ್ಲಿ ಒಟ್ಟಾಗುವ ಕುಟುಂಬಗಳು ಸಾಂಪ್ರದಾಯಿಕ ಅಡುಗೆ ಮಾಡಿ ಒಟ್ಟಿಗೆ ಉಣ್ಣುತ್ತವೆ. ಒಬ್ಬರ ಮೇಲೆ ಇನ್ನೊಬ್ಬರಿಗೆ ಇರಬಹುದಾದ ತಂಟೆ, ತಕರಾರು, ಮುನಿಸು ಇತ್ಯಾದಿಗಳನ್ನು ಮರೆಯಲು ಸಹಾಯ